**ಸಿಸಿ ಸಂಃ 1728/2017**

**2 ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಹೊಸಕೋಟೆ**

| | |
|---|---|
| ಸಾಕ್ಷಿದಾರರ ಹೆಸರು : ಜಗನಾಥರಾವ್ | ಪಿ ಡಬ್ಲೂ - 6 ಸಿ ಡಬ್ಲ್ಯೂ - 6 |
| ತಂದೆ ಹೆಸರುಃ ಆದೀಶ್ವರ್ ರಾವ್ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ:12.11.2025 |
| ವಯಸ್ಸುಃ 63 ವರ್ಷ | |
| ವೃತ್ತಿಃ ನಿವೃತ್ತ ಹೆಚ್.ಸಿ | |
| ವಾಸ ಸ್ಥಳಃ ಬನಶಂಕರಿ, ಬೆಂಗಳೂರು | |

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ</u>**

ನಾನು 2017 ರಿಂದ 2023 ವರೆಗೆ ನಂದಗುಡಿ ಪೋಲಿಸ್ ಠಾಣೆಯ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ14.03.2017 ರಂದು ಬೆಳಗ್ಗೆ 6:30 ಗಂಟೆಗೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು, ಠಾಣಾ ಮೊಕದಮೆ ಸಂಖ್ಯೆ:69/2017 ಕಲಂ.324, 504, ರೆಡ್ ವಿತ್ 34 ಐ.ಪಿ.ಸಿ ರಂತೆ ಪ್ರಕರಣ ದಾಖಲಿಸಿಕೊಂಡು, ಪ್ರ.ವ.ವರದಿಯನ್ನು ನ್ಯಾಯಾಲಯ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ, ಅದೇ ದಿನ ನಾನು ಲಿಂಗಾಪುರ ಗ್ರಾಮ ಸಾರ್ವಜನಿಕ ಬೋರ್ ವೆಲ್ ಹತ್ತಿರ ನಾರಾಣಯಸ್ವಾಮಿರವರ ಮನೆಯ ಪಕ್ಕ ಸ್ತಳ ಪಂಚನಾಮೆಯನ್ನು ಬೆಳಗ್ಗೆ 10:00 ರಿಂದ 10:45 ರವರೆಗೆ ಪಂಚರಾದ ಚಾ.ಸಾ.4 ಮತ್ತು ನಾಗರಾಜ್ ರವರ ಸಮಕ್ಷಮ ಮಹಜರು ಕ್ರಮವನ್ನು ಜರುಗಿಸಿ ಮೂರುವರೆ ಅಡಿ ಉದ್ದದ ನೀಲಗಿರಿ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ:24/2017 ರಲ್ಲಿ ನಮೂದಿಸಿಕೊಂಡಿದ್ದು, ಅದೇ ದಿನ ಚಾ.ಸಾ.2 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಚಾ.ಸಾ.7 ರವರಿಗೆ ಹಸ್ತಾಂತಸಿರುತ್ತೇನೆ.

ನಿ.ಪಿ.3 ರಲ್ಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ ಸದರಿ ಸಹಿಯನ್ನು **ನಿ.ಪಿ.3(ಬಿ)** ಎಂದು ಗುರುತಿಸಲಾಯಿತು. ನಿ.ಪಿ.1 ರಲ್ಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ ಸದರಿ ಸಹಿಯನ್ನು **ನಿ.ಪಿ.1(ಡಿ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದು ಪ್ರ.ವ.ವರದಿ ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ದಾಖಲೆಯನ್ನು **ನಿ.ಪಿ.6** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.6(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು.ಮಾಲು-1 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಆರ್ ವಕೀಲರಿಂದ.

ನಮ್ಮ ಠಾಣೆಯಿಂದ ಲಿಂಗಾಪುರಕ್ಕೆ 6 ಕಿ.ಮೀ ಆಗುತ್ತದೆ. ಲಿಂಗಾಪುರದಿಂದ ನಂದಗುಡಿಗೆ ಹೋಗಲು ಮತ್ತು ನಂದಗುಡಿಯಿಂದ ಲಿಂಗಾಪುರಕ್ಕೆ ಬರಲು ಎರಡು ಕಡೆ ದಾರಿ ಇರುತ್ತದೆ. ನಂದಗುಡಿಯಿಂದ ಲಿಂಗಾಪುರಕ್ಕೆ ಹೋಗಲು ಬಸ್ ಸಂಚಾರ ಇರುವುದಿಲ್ಲ. ಲಿಂಗಾಪುರದಿಂದ ನಂದಗುಡಿಗೆ ಹೋಗಲು ಮತ್ತು ನಂದಗುಡಿಯಿಂದ ಲಿಂಗಾಪುರಕ್ಕೆ ಹೋಗಲು ಖಾಸಗೀ ವಾಹನವನ್ನು ಬಳಸಬೇಕು ಎಂದರೆ ಸರಿ. ಯಾವುದೇ ವ್ಯಕ್ತಿ ಲಿಂಗಾಪುರದಿಂದ ನಂದಗುಡಿಗೆ ಬರಲು ಬೇರೆ ವಾಹನದ ವ್ಯವಸ್ಥೆ ಮಾಡಿಕೊಳ್ಳಬೇಕು ಮತ್ತು ಅದಕ್ಕೆ ಸುಮಾರು ಅರ್ಧ ಗಂಟೆಯಾದರೂ ಬೇಕಾಗುತ್ತದೆ ಎಂದರೆ ಅಕ್ಕ-ಪಕ್ಕದ ಮನೆಯ ಗಾಡಿಯಲ್ಲಿ ಬರಬಹುದು ಎಂದು ನುಡಿಯುತ್ತಾರೆ. ಗಾಡಿಯ ವ್ಯವಸ್ಥೆ ಆದರೆ ಲಿಂಗಾಪುರದಿಂದ ನಂದಗುಡಿಗೆ 15-20 ನಿಮಿಷದಲ್ಲಿ ತಲುಪಬಹುದು. ದೂರನ್ನು ನೀಡಲು ಪಿರ್ಯಾದುದಾರರು ಬಂದಿದ್ದರು, ಅವರ ಜೊತೆ ಯಾರ್ಯಾರು ಬಂದಿದ್ದರು ಎಂದರೆ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು, ಪಿರ್ಯಾದುದಾರರ ಜೊತೆ ಅವರ ಮಗಳು ಬಂದಿರಬಹುದು ಎಂದು ನುಡಿಯುತ್ತಾರೆ. ಪುನಃ ಸಾಕ್ಷಿ ಮುಂದುವರೆದು, ಪಿರ್ಯಾದುದಾರರ ಜೊತೆ

ಅವರ ಮಗಳು ಬಂದಿದ್ದರು ಎಂದು ನುಡಿಯುತ್ತಾರೆ. ಪಿರ್ಯಾದುದಾರರು ನೀಡಿದ ದೂರನ್ನು ಓದಿ ನಾನು ಪಿರ್ಯಾದಅನ್ನು ನೊಂದಣಿ ಮಾಡಿಕೊಂಡಿರುತ್ತೇನೆ. ಪಿರ್ಯಾದುದಾರರು ದೂರನ್ನು ಮೊದಲೇ ಬರೆದು ತಂದಿದ್ದರು. ದೂರಿನಲ್ಲಿ ಇಬ್ಬರೂ ಬಿಂದಿಗೆಯಲ್ಲಿ ಹೊಡೆದಾಡಿಕೊಳ್ಳುತ್ತಿದ್ದರು ಎಂದು ನಮೂದಾಗಿರುತ್ತದೆ ಎಂದರೆ ಸರಿ. ದೂರಿನಲ್ಲಿರುವ ಇಬ್ಬರು ಎಂದರೆ ಪಿರ್ಯಾದುದಾರರು ಮತ್ತು 1 ನೇ ಆರೋಪಿ ಆಗಿರುತ್ತಾರೆ ಎಂದರೆ ಸರಿ. ದೂರಿನಲ್ಲಿ ಪಿರ್ಯಾದುದಾರರೂ ಕೂಡ ಹೊಡೆದಾಡಿಕೊಳ್ಳುತ್ತಿದ್ದರು ಎಂದು ನಮೂದಿದ್ದಾಗ ಅವರ ವಿರುದ್ದ ದೂರನ್ನು ನೊಂದಣಿ ಮಾಡಿಕೊಂಡಿರುತ್ತಿರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದೂರಿನಲ್ಲಿ ಕೋಲು ದೂಳಾಗುವ ತನಕ ಹೊಡೆದರು ಎಂದು ನಮೂದಾಗಿರುತ್ತದೆ, ಸದರಿ ಕೋಲನ್ನು ಅಮಾನತ್ತುಪಡಿಸಿಕೊಂಡಿರುತ್ತಿರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದೂರನ್ನು ನೀಡಲು ಬಂದಾಗ, ಪಿರ್ಯಾದುದಾರರ ಮಗಳಿಗೆ ಗಾಯಗಳಾಗಿದ್ದವು. ಸದರಿಯವರನ್ನು ನಾನು ಚಿಕಿತ್ಸೆಗೆ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ನಮ್ಮ ಸಿಬ್ಬಂದಿಯವರ ಜೊತೆ ಚಿಕಿತ್ಸೆಗೆ ಕಳುಹಿಸಿರುವುದಿಲ್ಲ. ಚಿಕಿತ್ಸೆಯನ್ನು ಪಡೆಯಲು ಪಿರ್ಯಾದುದಾರರೇ ಹೋಗಿರುತ್ತಾರೆ. ಸುಮಾರು ಬೆಳಗ್ಗೆ 7:30 ಗಂಟೆಗೆ ಪಿರ್ಯಾದುದಾರರನ್ನು ಚಿಕಿತ್ಸೆ ಪಡೆಯಲು ಕಳುಹಿಸಿರುತ್ತೇನೆ. ಠಾಣೆಗೆ ಬಂದಾಗ ಪಿರ್ಯಾದುದಾರಗಾಗಲೀ, ಅವರ ಮಗಳಿಗಾಗಲೀ ಯಾವುದೇ ರೀತಿ ಗಾಯಗಳು ಆಗಿರುವುದಿಲ್ಲ ಆದ್ದರಿಂದ ಪಿರ್ಯಾದುದಾರನ್ನಾಗಲೀ , ಅವರ ಮಗಳನ್ನಾಗಲೀ ನಮ್ಮ ಸಿಬ್ಬಂದಿಯ ಜೊತೆ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಲಿಂಗಾಪುರದಲ್ಲಿ ಪಿರ್ಯಾದುದಾರರು ಹೇಳೀದ ರೀತಿಯಲ್ಲಿ ಯಾವುದೇ ರೀತಿಯ ಗಲಾಟೆ ಆಗಿರುವುದಿಲ್ಲ, ಆದ್ದರಿಂದ ಅವರಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ, ಪಿರ್ಯಾದುದಾರರು ನೀಡಿದು ಸುಳ್ಳು ದೂರುನ್ನು ಪಡೆದು, ಆರೋಪಿಗಳ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಿರಾ ಎಂದರೆ ಸರಿಯಲ್ಲ. ಚಾ.ಸಾ.2 ರವರಿಂದ ಯಾವುದೇ ಹೇಳೀಕೆಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಪಿರ್ಯಾದುದಾರರಿಗೆ

ಅನುಕೂಲವಾಗಲೀ ಎಂದು ಈ ಪ್ರಕರಣಕ್ಕೆ ಬೇಕಾದ ರೀತಿಯಲ್ಲಿ ಹೇಳಿಕೆಯನ್ನು ಸೃಷ್ಟಿ ಮಾಡಿಕೊಂಡಿರುತ್ತಿರಾ ಎಂದರೆ ಸರಿಯಲ್ಲ. ನಾನು ಮತ್ತು ಪೋಲಿಸರು ಪೋಲಿಸರ ವಾಹನದಲ್ಲಿ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳಕ್ಕೆ ನನ್ನ ಜೊತೆ ಯಾರು ಬಂದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಜೊತೆ ಬಂದ ಪೋಲಿಸರ ಸಹಿಯನ್ನು ಪಂಚನಾಮೆಗೆ ಪಡೆದಿರುವುದಿಲ್ಲ. ಪಂಚರಿಗೆ ಯಾವುದೇ ನೋಟಿಸ್ ಅನ್ನು ನೀಡಿರುವುದಿಲ್ಲ. ಸ್ಥಳದಲ್ಲೇ ಇದ್ದ ಜನರನ್ನು ಪಂಚ ಸಾಕ್ಷಿಗಳನ್ನಾಗಿ ಮಾಡಿರುತ್ತೇನೆ. ಸ್ಥಳದಲ್ಲಿ ಯಾವುದೇ ಬಿಂದಿಗೆಯನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾಲು-1 ಸಾಮನ್ಯವಾಗಿ ಎಲ್ಲಾ ರೈತರ ಮನೆಯಲ್ಲಿ ಸಿಗುತ್ತದೆ ಎಂದರೆ ಸರಿ. ಮು.ಮಾಲು-1 ಅನ್ನು ಸ್ಥಳದಲ್ಲೇ ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದು ತೋರಿಸಲು ಅದರ ಮೇಲೆ ಯಾರ ಸಹಿಯನ್ನು ಕೂಡ ಪಡೆದುಕೊಂಡಿರುವುದಿಲ್ಲ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ಯಾವುದೇ ಪಂಚನಾಮೆ ಯನ್ನು ಮಾಡಿಕೊಂಡಿರುವುದಿಲ್ಲ. ಆದ್ದರಿಂದ ಮು.ಮಾಲು-1 ರ ಮೇಲೆ ಯಾರ ಸಹಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಪಂಚರ ಸಹಿಯನ್ನು ಪಡೆದುಕೊಂಡಿರುವುದಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ, ಪೋಲಿಸ್ ಠಾಣೆಯಲ್ಲಿ ಕುಳಿತು ಫಿರ್ಯಾದುದಾರಿಗೆ ಅನುಕೂಲವಾಗಲೀ ಎಂದು ಪಂಚನಾಮೆಯನ್ನು ಸೃಷ್ಟಿಸಿ, ಠಾಣೆಯಲ್ಲೇ ಪಂಚರ ಸಹಿಯನ್ನು ಪಡೆದುಕೊಂಡಿರುತ್ತಿರಾ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಾಎಂದರೆ ಸರಿಯಲ್ಲ. ಚಾ.ಸಾ.2 ರವರ ಹೇಳಿಕೆಯನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಚಾ.ಸಾ.2 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಈ ಪ್ರಕರಣದ ಫಿರ್ಯಾದುದಾರರು ಲಿಂಗಾಪುರದ ವಿವಿಧ ಜನರ ವಿರುದ್ದ ಸುಳ್ಳು ಸುಳ್ಳು ದೂರನ್ನು ನೀಡುತ್ತಾರೆ

ಎಂದರೆ ನನಗೆ ಗೊತ್ತಿಲ್ಲ. ಮು.ಮಾಲು-1 ಈ ಪ್ರಕರಣಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೋಸ್ಕರ ಮು.ಮಾಲು-1 ಅನ್ನು ಪಿರ್ಯಾದುದಾರರ ಜೊತೆ ಸೇರಿ ಸೃಷ್ಟಿ ಮಾಡಿಕೊಂಡಿರುತ್ತಿರಾ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ** ಇಲ್ಲ</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ